3) ಮೊಕದ್ದಮೆಗಳನ್ನು ನಾಮೋದಿಷ್ಟ ಅಥವಾ ನಿಗದಿಪಡಿಸಿದ ನ್ಯಾಯಾಲಯ ವಿಚಾರಿಸ ಬಹುದಾಗಿದೆ.

4) ಒಳಾಂಗಣ ವಿಚಾರಣೆ ನಡೆಸಬಹುದಾಗಿದೆ.

5) ಆಪಾದಿತ ವ್ಯಕ್ತಿ ತದ್ವಿರುದ್ಧವಾಗಿ ಸಿದ್ಧಪಡಿಸಿದ ಹೊರತು ವಿಚಾರಣೆ ಮಾಡುವ ನ್ಯಾಯಾಲಯ ಆಪಾದಿತನ ಮೇಲೆ ಇರುವ ಅಪಾದನೆಗಳ ಬಗ್ಗೆ ಕೆಲವು ಊಹೆಗಳನ್ನು ಸಂಕಲ್ಪಿಸಬಹುದು.

6) ಅಪಾದಿತರು ಎಸ್. ಪಿ. ಅಥವಾ ಮೇಲ್ಪಟ್ಟ ಅಧಿಕಾರಿಗಳ ಮುಂದೆ ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದಲ್ಲಿ ಅದನ್ನು ನ್ಯಾಯಾಲಯ ಗಣನೆಗೆ ತೆಗೆದುಕೊಳ್ಳಬಹುದಾಗಿದೆ.

7) ನಿರೀಕ್ಷಣಾ ಜಾಮೀನು ಪಡೆಯಲು ಅವಕಾಶವಿಲ್ಲ.

8) ಶಿಕ್ಷೆಗೊಳಗಾದವರ ಆಸ್ತಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಲು ಅವಕಾಶವಿದೆ.

9) ಆಪಾದಿತನಿಗೆ ಹೆಚ್ಚಿನ ಶಿಕ್ಷೆ ಅಥವಾ ದಂಡ ವಿಧಿಸಲು ಅವಕಾಶವಿದೆ.

10) ಕನಿಷ್ಠ 5 ವರ್ಷದವರೆಗೆ ಬಂಧನದಲ್ಲಿಡಬಹುದಾಗಿದೆ.

11) ಶಿಕ್ಷೆಗೊಳಗಾದ ವ್ಯಕ್ತಿ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಬಹುದಾಗಿದೆ.

ಆ) ಹೌದು.

ಇ) ಈ ಕಾಯ್ದೆಯನ್ನು ಅತಿ ಗಂಭೀರ ಪರಿಸ್ಥಿತಿಯಲ್ಲಿ ಅಂದರೆ ಕೋಮು ಸೌಹಾರ್ದತೆಗೆ ದೊಡ್ಡ ಕುಂದು ಬರುವ ಸಂದರ್ಭದಲ್ಲಿ ಮತ್ತು ಹೆಚ್ಚು ಪ್ರಮಾಣದಲ್ಲಿ ಕೋಮು ಗಲಭೆಗಳಾದಾಗ ಭಯೋತ್ಪಾದಕ ಹಾಗೂ ವಿಚಿದ್ರಕಾರಿ ಚಟುವಟಿಕೆಗಳು ನಡೆದಾಗ ಉಪಯೋಗಿಸಬಹುದಾಗಿದೆ.

ಅದನ್ನು ಈ ಕೆಳಗೆ ಹೇಳಿರುವಂತಹ ವ್ಯಕ್ತಿಗಳ ಮೇಲೆ ಉಪಯೋಗಿಸಬಹುದು.

1) ಮದ್ದು ಗುಂಡು, ಬಂಧೂಕು, ಇತರೆ ಆಯುಧ ವಗೈರೆಗಳನ್ನು ಉಪಯೋಗಿಸಿ ಸಾರ್ವಜನಿಕರನ್ನು ಭಯೋತ್ಪಾದನೆಗೆ ಗುರಿ ಮಾಡುವವರ ಮೇಲೆ;

2) ಇಂತಹ ಕೃತ್ಯಗಳನ್ನು ಎಸಗಲು ಸಹಕರಿಸುವವರ ಮತ್ತು ಮತೀಯ ಗಲಭೆಗಳನ್ನು ಉಂಟು ಮಾಡುವವರ ಮೇಲೆ;

3) ಪರವಾನಗೆ ಇಲ್ಲದೆ ಮದ್ದು ಗುಂಡು ಮತ್ತು ಬಂಧೂಕು ಮುಂತಾದ ಆಯುಧಗಳನ್ನು ಹೊಂದಿರುವವರ ಮೇಲೆ;

4) ಭಯೋತ್ಪಾದಕರ ಸಂಪರ್ಕ ಹೊಂದಿರುವ ಸರ್ಕಾರಿ ಅಧಿಕಾರಿಗಳ ಮೇಲೆ ಮತ್ತು ಭಯೋತ್ಪಾದನೆಯಿಂದ ಸರ್ಕಾರವನ್ನು ಬದಲಿಸಲು ಪ್ರಯತ್ನ ಪಡುವಂಥವರ ಮೇಲೆ;

ಈ) ಇಲ್ಲ. ಆದರೆ ಇನ್ನು ಮುಂದೆ ಸಂಭವಿಸಬಹುದಾದ ಕೋಮು ಗಲಭೆಗಳನ್ನು ತಡೆಗಟ್ಟುವಲ್ಲಿ ಸದರಿ ಕಾಯ್ದೆಯನ್ನು ಒಂದು ಪರಿಣಾಮಕಾರಿಯಾದ ಆಯುಧವನ್ನಾಗಿ ಉಪಯೋಗಿಸಲು ಉದ್ದೇಶಿಸಿದೆ.

ಉ) ಮೇಲೆ (ಈ) ಪ್ರಶ್ನೆಗೆ ನೀಡಿರುವ ಉತ್ತರ ಇದಕ್ಕೂ ಅನ್ವಯಿಸುತ್ತದೆ.

ಊ) ರಾಜ್ಯದ ಕೆಲವು ಸೂಕ್ಷ್ಮ ಪ್ರದೇಶದ ಜಿಲ್ಲೆಗಳಲ್ಲಿ ಸದರಿ ಕಾಯ್ದೆಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲಾಗುವುದು.

ವಿಷಯ :– ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದಲ್ಲಿ ಜ್ಞಾನ-ವಿಜ್ಞಾನ ಜಾಥಾದವರಿಗೆ ಪೋಲೀಸರಿಂದ ಹಿಂಸೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 747 (1131)

ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) :– ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉತ್ತರ ಕನ್ನಡ ಜಿಲ್ಲೆಯಾದ್ಯಂತ ಸಾಕ್ಷರತಾ ಜಾಗೃತಿ ಮೂಡಿಸಲು ಸಂಚರಿಸುತ್ತಿರುವ ಭಾರತ ಜ್ಞಾನ-ವಿಜ್ಞಾನ ಜಾತಾ ಕಾರ್ಯಕರ್ತರು ಹಾಗೂ ಕಲಾವಿದರನ್ನು ಗೋಕರ್ಣದ ಪೋಲೀಸರು ಥಳಿಸಿ ಅವರೊಂದಿಗೆ ಅಮಾನುಷವಾಗಿ ವರ್ತಿಸಿದ ಘಟನೆ ದಿನಾಂಕ 28–11–90 ರಂದು ನಡೆದಿರುವುದು ನಿಜವೇ ?

ಅ) ಈ ಬಗ್ಗೆ ಜಾಥಾದ ಜಿಲ್ಲಾ ಸಂಚಾಲಕರು ಪೋಲೀಸರಿಗೆ ದೂರು ನೀಡಿದ್ದಾರೆಯೇ ?

ಇ) ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು ಈ ಜಾತಾದ ಜಿಲ್ಲಾ ಘಟಕದ ವಿಶೇಷ ಸಲಹೆಗಾರರಾಗಿದ್ದಾರೆಂದು ತಿಳಿಸಿದರೂ ಪೋಲೀಸರು ಲಕ್ಷಿಸದೇ ಜಾತಾದವರನ್ನು ಥಳಿಸಿ ಹಿಂಸಿಸಿರುವುದರಿಂದ ಕೂಡಲೇ ಸಂಬಂಧಪಟ್ಟವರ ಮೇಲೆ ಸರ್ಕಾರ ಶಿಸ್ತಿನ ಕ್ರಮ ಕೈಗೊಳ್ಳುತ್ತದೆಯೇ ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಸಚಿವರು) :–

ಅ) ನಿಜವಲ್ಲ.

ಆ) ಇಲ್ಲ.

ಇ) ಈ ಬಗ್ಗೆ ನಡೆಸಿದ ತನಿಖೆಯ ಪ್ರಕಾರ ಗೋಕರ್ಣದ ಮಹಾಬಲ ಅಡಿಯವರು ದಿನಾಂಕ 28/29 ನವೆಂಬರ್ ರಾತ್ರಿ ನಡೆದ ವಿಚಾರದ ಬಗ್ಗೆ ಜಾತಾ ತಂಡದ ದಯಾನಂದ ಹಿರೇಮಠ, ಚಂದ್ರಶೇಖರ ಮರಡಿಮಠ ಮತ್ತು ಶ್ರೀನಿವಾಸ ರಾಮರಾಯ ದೇಸಾಯಿ ಎಂಬುವರ ವಿರುದ್ಧ ಸಲ್ಲಿಸಿದ ದೂರನ್ನು ಪೋಲೀಸರು ವಿಚಾರಿಸಿದರು. ದಿನಾಂಕ 3–12–90 ರಂದು ಜಿಲ್ಲಾ ಪೋಲೀಸ್ ಕಛೇರಿಗೆ ಈ ಮೂರು ಜನರು ಗೋಕರ್ಣ ಪೋಲೀಸರ ವಿರುದ್ಧ ಸಲ್ಲಿಸಿದ ದೂರನ್ನು ಕುಮಟ ಸಿ. ಪಿ. ಐ. ವಿಚಾರಣೆ ಮಾಡಲಾಗಿ ಆರೋಪ ಸುಳ್ಳೆಂದು ಸಾಬೀತಾಗಿದೆ. ಆದ್ದರಿಂದ ಪೋಲೀಸರ ವಿರುದ್ಧ ಕ್ರಮ ಕೈಗೊಳ್ಳುವ ಅವಶ್ಯಕತೆಯಿರುವುದಿಲ್ಲ.

ವಿಷಯ :– ಕರ್ನಾಟಕ ಪೋಲೀಸ್ ಇಲಾಖೆಯ ಪುನರ್‌ರಚನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 748 (825)

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ) :– ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪೋಲೀಸ್ ಇಲಾಖೆಯನ್ನು ಸುವ್ಯವಸ್ಥಿತ ಹಾಗೂ ರಾಜ್ಯದ ಜನಸಂಖ್ಯೆಯ ಅನುಗುಣವಾಗಿ ಪುನರ್ ರಚಿಸಲು ಸರ್ಕಾರದ ಕಾರ್ಯಕ್ರಮವೇನು ?

ಆ) ಪೋಲೀಸ್ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ಎನ್.ಸಿ.ಸಿ. ಶಿಕ್ಷಣ ಪಡೆದಿರುವ ಅಭ್ಯರ್ಥಿಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ನೇಮಿಸಲು ಉದ್ದೇಶವಿದೆಯೇ ?

ಇ) ಇತ್ತೀಚೆಗೆ ಗಲಭೆಗಳು ನಡೆದಾಗ ಬೇರೆ ರಾಜ್ಯದಿಂದ ಎಷ್ಟು ಪೋಲೀಸ್ ಸಿಬ್ಬಂದಿಯನ್ನು ಉಪಯೋಗ ಮಾಡಲಾಗಿದೆ ?

ಈ) ಪೋಲೀಸ್ ಸಿಬ್ಬಂದಿ ವರ್ಗಕ್ಕೆ ವಿಶೇಷವಾದಂತಹ ಹೆಚ್ಚಿನ ವಿಮೆ ಮಾಡಲು ಸರ್ಕಾರದ ಕಾರ್ಯಕ್ರಮವೇನು ?

ಶ್ರೀ ಧರ್ಮಸಿಂಗ ನಾರಾಯಣಸಿಂಗ್ (ಗೃಹ ಮಂತ್ರಿಗಳು) :–

ಅ) ರಾಷ್ಟ್ರೀಯ ಪೋಲೀಸ್ ಆಯೋಗದ ಶಿಫಾರಸಿನಂತೆ ರಾಜ್ಯದ ವಿಸ್ತೀರ್ಣ ಮತ್ತು ಜನಸಂಖ್ಯೆಗನುಗುಣವಾಗಿ ಪೋಲೀಸ್ ಠಾಣೆ ಮತ್ತು ಸಿಬ್ಬಂದಿಗಳನ್ನು ವ್ಯವಸ್ಥೆಗೊಳಿಸಲು ಉದ್ದೇಶಿಸಲಾಗಿದೆ.

ಆ) ಇಲ್ಲ.

ಇ) ಸೆಪ್ಟೆಂಬರ್ 1990 ರಿಂದ ಬೇರೆ ಬೇರೆ ಸಂದರ್ಭಗಳಲ್ಲಿ ನೆರೆಯ ರಾಜ್ಯಗಳ ಮತ್ತು ಕೇಂದ್ರ ಮೀಸಲು ಪಡೆಯ ಹನ್ನೆರಡಕ್ಕೂ ಹೆಚ್ಚು ಕಂಪನಿಗಳ ಸಶಸ್ತ್ರ ಪೋಲೀಸ್‌ರನ್ನು ಕರ್ನಾಟಕ ರಾಜ್ಯದಲ್ಲಿ ಉಪಯೋಗಿಸಲಾಗಿದೆ.

ಈ) ಕರ್ತವ್ಯಾವಧಿಯಲ್ಲಿ ಮೃತ ಪಡುವ ಪೋಲೀಸ್ ಸಿಬ್ಬಂದಿಗೆ ಒಂದು ಲಕ್ಷ ರೂಪಾಯಿಗಳನ್ನು ನೀಡುವುದಕ್ಕೆ ಸಂಬಂಧಿಸಿ ಸಾಮೂಹಿಕ ವಿಮಾ ಯೋಜನೆಯನ್ನು ಜಾರಿಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ.

ವಿಷಯ :– ಮೂಡಿಗೆರೆ ತಾಲ್ಲೂಕಿನ ಹರಿಜನ ಗಿರಿಜನ ವಿದ್ಯಾರ್ಥಿಗಳ ಹಾಸ್ಟೆಲ್.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 751 (1233)

ಶ್ರೀಮತಿ ಮೋಟಮ್ಮ (ಮೂಡಿಗೆರೆ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?